## ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಆರ್.ಬಿ.ತಿಮ್ಮಾಪೂರ್ ರವರ ನಿಯಮ 330ರ ಸೂಚನೆಗೆ ಉತ್ತರ

**ವಿಷಯ:** ಬೆಂಗಳೂರಿನ ವಿಜಯನಗರದ ಮಾರೇನಹಳ್ಳಿ ಮುಖ್ಯರಸ್ತೆಯಲ್ಲಿರುವ ತಿರುಮಲ ಟ್ರೂ ಸ್ಪಿರಿಟ್ (ಸಿಎಲ್–2) ಹೆಸರಿನಲ್ಲಿ ಕಳೆದ 18 ವರ್ಷಗಳಿಂದ ಬಾರ್‌ನ್ನು ಅನಧಿಕೃತವಾಗಿ ನಡೆಸುತ್ತಾ, ಕಟ್ಟಡ ಮಾಲೀಕರ ಅನುಮತಿಯನ್ನೂ ಪಡೆಯದೆ ಹಾಗೂ ಬಾಡಿಗೆಯನ್ನೂ ಪಾವತಿಸದೆ ಬಾರ್‌ನ ಸ್ಥಳವನ್ನು ಹೆಚ್ಚುವರಿಯಾಗಿ ಅತಿಕ್ರಮಿಸಿಕೊಂಡು ಕಟ್ಟಡದ ಮಾಲೀಕರಿಗೆ ಕಿರುಕುಳ ನೀಡುತ್ತಿದ್ದು, ಬಾರ್ ಮಾಲೀಕನ ಎಲ್ಲ ಅನಧಿಕೃತ ಚಟುವಟಿಕೆಗಳಿಗೆ ಬೆಂಬಲವಾಗಿ ನಿಂತಿರುವ ಅಬಕಾರಿ ಇಲಾಖೆಯ ಅಧಿಕಾರಿಗಳು, ಬೆಸ್ಕಾಂ ಅಧಿಕಾರಿಗಳು ಹಾಗೂ ಪೊಲೀಸ್ ಅಧಿಕಾರಿಗಳ ಮೇಲೆ ಕಾನೂನು ರೀತಿಯ ಕ್ರಮ ಕೈಗೊಳ್ಳುವುದು ಹಾಗೂ ಸದರಿ ಸ್ಥಳದಿಂದ ಬಾರ್ ಮಾಲೀಕರನ್ನು ತೆರವುಗೊಳಿಸುವ ಕುರಿತು.

**ಸರ್ಕಾರದ ಉತ್ತರ:**

ಮೆ॥ ಸೂರ್ಯ ಅಸೋಸಿಯೇಟ್ಸ್, ತಿರುಮಲ ಟ್ರೂ ಸ್ಪಿರಿಟ್ಸ್, ಸಿಎಲ್–2 ಸನ್ನದು ಕಟ್ಟಡ ಸಂಖ್ಯೆ:24/24, 17ನೇ ಅಡ್ಡ ರಸ್ತೆ, 20ನೇ ಮುಖ್ಯ ರಸ್ತೆ, ಮಾರೇನಹಳ್ಳಿ ಮುಖ್ಯ ರಸ್ತೆ, ವೆಸ್ಟ್ ಆಫ್ ಕಾರ್ಡ್ ರೋಡ್, ಬೆಂಗಳೂರು ಇಲ್ಲಿಗೆ 2005–06ನೇ ಸಾಲಿಗೆ ಸ್ಥಳಾಂತರಗೊಂಡು ಪ್ರತಿ ವರ್ಷ ನವೀಕರಣಗೊಂಡು ಅಧಿಕೃತವಾಗಿಯೇ ಮದ್ಯದ ವ್ಯವಹಾರ ನಡೆಸಿಕೊಂಡು ಬರುತ್ತಿದೆ. ಸನ್ನದು ಸ್ಥಳಾಂತರ ಪೂರ್ವದಲ್ಲಿ ಕಟ್ಟಡ ಮಾಲೀಕರಾದ ಶ್ರೀ ಕೆ.ಎಸ್ ರಾಜೇಶ್, ಸದರಿ ಸನ್ನದು ವ್ಯವಹಾರವನ್ನು ನಡೆಸಲು ಯಾವುದೇ ಅಭ್ಯಂತರವಿಲ್ಲವೆಂದು ಬಾಡಿಗೆ ಕರಾರು ಮಾಡಿಕೊಂಡಿರುತ್ತಾರೆ. ಮುಂದುವರೆದು, ಸದರಿ ಸನ್ನದಿನ ಆವರಣವನ್ನು 2014–15ನೇ ಸಾಲಿನಲ್ಲಿ ವಿಸ್ತರಿಸಿಕೊಂಡಿದ್ದು, ವಿಸ್ತರಿಸಿಕೊಂಡಿರುವ ನೀಲಿ ನಕಾಶೆಯು ಅಬಕಾರಿ ಇಲಾಖೆಯಿಂದ ಅನುಮೋದನೆಯಾಗಿರುತ್ತದೆ.

ಪ್ರಸ್ತುತ ಕಟ್ಟಡ ಮಾಲೀಕರಾದ ಶ್ರೀ ಎಂ ಗುರುಪ್ರಸಾದ್, ಶ್ರೀಮತಿ ಸರೋಜ ಹಾಗೂ ಇತರರು ದಿನಾಂಕ:18.09.2021 ರಿಂದ ದಿನಾಂಕ:05.10.2021ರ ಅವಧಿಯಲ್ಲಿ ಮೆ॥ ಸೂರ್ಯ ಅಸೋಸಿಯೇಟ್ಸ್, ತಿರುಮಲ ಟ್ರೂ ಸ್ಪಿರಿಟ್ಸ್, ಸಿಎಲ್–2 ಸನ್ನದುದಾರರ ವಿರುದ್ಧ ಸಲ್ಲಿಸಿದ ದೂರಿನ ಮೇರೆಗೆ ಜಾಗೃತ ಅಧಿಕಾರಿಗಳು ಮತ್ತು ಅಬಕಾರಿ ಉಪ ಅಧೀಕ್ಷಕರು, ಅಬಕಾರಿ ಉಪ ಆಯುಕ್ತರ ಕಛೇರಿ, ಬಿಯುಡಿ–3 ಇವರು ಈ ವಿಷಯದ ಬಗ್ಗೆ ಪರಿಶೀಲನೆ ನಡೆಸಿ ದಿನಾಂಕ:23.11.2021 ರಂದು ವರದಿಯನ್ನು ಸಲ್ಲಿಸಿದ ನಂತರ ಅಬಕಾರಿ ಉಪ ಆಯುಕ್ತರು, ಬಿಯುಡಿ–3 ಇವರು ದೂರುದಾರರು ಹಾಗೂ ಸನ್ನದುದಾರರ

ಸಮಕ್ಷಮದಲ್ಲಿ ದಿನಾಂಕ:04.01.2022 ರಿಂದ ದಿನಾಂಕ:21.01.2022 ರವರೆಗೆ ವಿಚಾರಣೆಯನ್ನು ನಡೆಸಿರುತ್ತಾರೆ. ವಿಚಾರಣೆಯಲ್ಲಿ ಹಾಜರುಪಡಿಸಿದ ದಾಖಲೆಗಳು ಹಾಗೂ ಹೇಳಿಕೆಗಳನ್ನು ಪರಿಗಣಿಸಿ ಆದೇಶ ಸಂಖ್ಯೆ: ಇಎಕ್ಸ್‌ಇ/ ಬಿಯುಡಿ–3/ದೂರು/20&22/2021–22 ದಿನಾಂಕ:03.02.2022ರಲ್ಲಿ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು 1967ರ ನಿಯಮ 5(2–ಎ) ರಡಿಯಲ್ಲಿ ಮೆ॥ ಸೂರ್ಯ ಅಸೋಸಿಯೇಟ್ಸ್, ತಿರುಮಲ ಟ್ರೂ ಸ್ಪಿರಿಟ್ಸ್ ಹೆಸರಿನಲ್ಲಿ ಇರುವ ಸಿಎಲ್–2 ಸನ್ನದನ್ನು ಆದೇಶ ತಲುಪಿದ ದಿನಾಂಕದಿಂದ 60 ದಿನದೊಳದಾಗಿ ಬೇರೊಂದು ಆಕ್ಷೇಪಣಾ ರಹಿತ ಸ್ಥಳಕ್ಕೆ ಸ್ಥಳಾಂತರಿಸಿಕೊಳ್ಳಲು ಸನ್ನದುದಾರರಿಗೆ ಸೂಚಿಸಲಾಗಿರುತ್ತದೆ. ದಿನಾಂಕ:03.02.2022ರಂದು ಆದೇಶವನ್ನು ಜಾರಿ ಮಾಡಲಾಗಿದ್ದು ದಿನಾಂಕ:03.04.2022ರೊಳಗಾಗಿ ಸದರಿ ಸನ್ನದನ್ನು ಸ್ಥಳಾಂತರ ಮಾಡಿಕೊಳ್ಳಬೇಕಾಗಿರುತ್ತದೆ.

**ಆಇ 65 ಇಎಲ್‌ಕ್ಯೂ 2022**

(ಕೆ. ಗೋಪಾಲಯ್ಯ)
ಅಬಕಾರಿ ಸಚಿವರು